1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಬೆಂಗಳೂರು ನಗರ
ಸಿ.ಸಿ. ನಂ. 20364-2020

ಸಿಡಬ್ಲೂ -6 ಪಿಡಬ್ಲೂ-4

ಸಾಕ್ಷಿದಾರರ ಹೆಸರು : ಕೃಷ್ಣ
ತಂದೆಯ ಹೆಸರು : ಲಿಂಗಪ್ಪ
ವಯಸ್ಸು : 53 ವರ್ಷ
ಕೆಲಸ : ಎ ಎಸ್ ಐ, ಬ್ಯಾಡರಹಳ್ಳಿ ಪೊ.ಠಾ
ವಾಸ : ಬೆಂಗಳೂರು

ಸಾಕ್ಷಿಯನ್ನು ದಿನಾಂಕಃ 25-09-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.
ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ನಾನು 2020 ರಿಂದ 2023 ರವರೆಗೆ ಸದಾಶಿವನಗರ ಪೋಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 21-10-2020 ರಂದು ಚಾಸಾ 15 ರವರು ನನ್ನನ್ನು ಚಾಸಾ 7 ರಿಂದ 11 ರವರನ್ನು ತಮ್ಮೊಂದಿಗೆ ಕರೆದುಕೊಂಡು ಗಸ್ತು ಮಾಡುತ್ತಿದ್ದಾಗ ಸ್ಯಾಂಕಿ ಕೆರೆಯ ಬಳಿ 6 ಜನ ಆಸಾಮಿಗಳ ತಮ್ಮ ಕೈಗಳಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಸೂಲಿಗೆಗೆ ಸಂಚು ರೂಪಿಸುತ್ತಿರುವುದು ಕಂಡು ಬಂದಿದ್ದು ಅವರುಗಳ ಮೇಲೆ ದಾಳಿ ಮಾಡಿ ಅವರುಗಳನ್ನು ಹಿಡಿದುಕೊಂಡು ಅವರ ಬಳಿ ಇದ್ದ ಆಯುಧ ಮತ್ತು 2 ಮೊಬೈಲ್ ಫೋನ್ ಗಳನ್ನ ಪಂಚನಾಮೆಯ ಮೂಲಕ ಪಂಚರ ಸಮಕ್ಷಮ ಅಮಾನತ್ತ ಪಡಿಸಿಕೊಂಡು ಮಾಲು ಮತ್ತು ಆಸಾಮಿಗಳ ಸಮೇತ ಠಾಣೆಗೆ ಹಿಂದುರುಗಿ ಚಾಸಾ 15 ರವರು ಚಾಸಾ 13 ರವರಿಗೆ ಮುಂದಿನ ಕ್ರಮಕ್ಕಾಗಿ ವರದಿ ನೀಡಿರುತ್ತಾರೆ. ಸಾಕ್ಷಿಯು ನಿಪಿ. 4 ರಿಂದ 6 ದಾಖಲೆಗಳನ್ನು ಮತ್ತು ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

ಮೊಬೈಲ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇರುವ ಕಾರಣ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದುಡಲಾಯಿತು

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ